ನೋಂದಣಿ ಅಂಚೆ ಮೂಲಕ

**ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ, ಗ್ರಾಮಲೆಕ್ಕಿಗರಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರ,**
**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು–577 101**

---

ಸಂ:ಇಎಸ್‌ಟಿ(2)ಸಿಆರ್127/2016-17 ದಿನಾಂಕ: 24-12-2016

**-: ತಿಳುವಳಿಕೆ ಪತ್ರ :-**

ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ನೀವು ಚಿಕ್ಕಮಗಳೂರು ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳಿಗೆ ನೇಮಕಾತಿಗಾಗಿ ಅರ್ಜಿಸಲ್ಲಿಸಿದ್ದು, ಈ ಸಂಬಂಧ ನೀವು **ದಿನಾಂಕ : 09-01-2017 ರಂದು ಬೆಳಿಗ್ಗೆ 10-00 ಗಂಟೆಗೆ ವಾರ್ತಾ ಮತ್ತು ಪ್ರಚಾರ ಇಲಾಖೆ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಚಿಕ್ಕಮಗಳೂರುಇಲ್ಲಿ** ಮೂಲ ದಾಖಲಾತಿಗಳ ಪರಿಶೀಲನೆಗೆ (ವರ್ಗವಾರು ಮೀಸಲಾತಿಗೆ ಅನ್ವಯಿಸುವಂತೆ ದಾಖಲೆ) ಈ ಕೆಳಕಂಡ ಮೂಲ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗುವಂತೆ ತಿಳಿಯಪಡಿಸಿದೆ. ತಪ್ಪಿದಲ್ಲಿ ನಿಮ್ಮ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ತಿಳಿಯುವುದು.

| ಕ್ರ.ಸಂ. | ಪರಿಶೀಲನೆಗೆ ಹಾಜರುಪಡಿಸಬೇಕಾದ ಮೂಲ ದಾಖಲೆಗಳು |
|---|---|
| 1 | ಪಿಯುಸಿ /ಸಿಬಿಎಸ್‌ಸಿ/ಐಸಿಎಸ್‌ಇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಗ್ಗೆ ಮೂಲ ಅಂಕಪಟ್ಟಿ |
| 2 | ಹುಟ್ಟಿದ ದಿನಾಂಕದ ಬಗ್ಗೆ (ಎಸ್.ಎಸ್.ಎಲ್.ಸಿ. ಅಂಕಪಟ್ಟಿಅಥವಾ ವರ್ಗಾವಣೆ ಪ್ರಮಾಣ ಪತ್ರ) |
| 3 | ಸೇವೆಯಲ್ಲಿರುವ ಅಭ್ಯರ್ಥಿಗಳು ಅವರು ಸೇವೆಯಲ್ಲಿರುವ ಬಗ್ಗೆ ಪ್ರಮಾಣ ಪತ್ರ ಮತ್ತು ಸದರಿ ಹುದ್ದೆಗೆ ಅರ್ಜಿಸಲ್ಲಿಸುವ ಬಗ್ಗೆ ನೇಮಕಾತಿ ಪ್ರಾಧಿಕಾರದಿಂದ ಪಡೆದ ನಿರಾಕ್ಷೇಪಣಾ ಪ್ರಮಾಣ ಪತ್ರ (NOC) |
| 4 | ಜಾತಿ ದೃಢೀಕರಣ:- ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ (ಅನುಬಂಧ -1 ನಮೂನೆ-4), ಪ್ರವರ್ಗ-1 (ಅನುಬಂಧ-1 ನಮೂನೆ ಎ) ಹಾಗೂ 2ಎ, 2ಬಿ, 3ಎ, 3ಬಿ (ಅನುಬಂಧ-3 ನಮೂನೆ ಎಫ್) |
| 5 | ಆದಾಯ ದೃಢೀಕರಣ ಪತ್ರ |
| 6 | ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ |
| 7 | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಬಗ್ಗೆ ಪ್ರಮಾಣ ಪತ್ರ |
| 8 | ಸೈನಿಕ ಸೇವೆಯಿಂದ ಬಿಡುಗಡೆಯಾದ ಬಗೆಗಿನ ಪ್ರಮಾಣ ಪತ್ರ |
| 9 | ಕಂಪ್ಯೂಟರ್ ಸಾಮಾನ್ಯ ಜ್ಞಾನ ಹೊಂದಿರುವ ಬಗ್ಗೆ ಪ್ರಮಾಣ ಪತ್ರ |
| 10 | ಅರ್ಜಿ ಸ್ವೀಕೃತಿ ಸ್ಲಿಪ್ ಹಾಗೂ ಹಣ ಪಾವತಿಸಿದ ಬಗ್ಗೆ ಮೂಲ ಚಲನ್ ಪ್ರತಿ |
| 11 | ನಿಗದಿತ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಸಂಬಂಧಪಟ್ಟ ಜಿಲ್ಲಾಮಟ್ಟದವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ |
| 12 | ಯೋಜನಾ ನಿರಾಶ್ರಿತರಾಗಿದ್ದಲ್ಲಿ ದೃಢೀಕರಣ ಪತ್ರ |
| 13 | ಅರ್ಜಿಯಲ್ಲಿ ನಮೂದಿಸಿರುವ ದಾಖಲೆಗಳ ಒಂದು ಸೆಟ್ ಜೆರಾಕ್ಸ್ ಪ್ರತಿಯನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಹಾಜರುಪಡಿಸತಕ್ಕದ್ದು. |
| 14 | ಇತ್ತೀಚಿನ 2 ಕಲರ್ ಭಾವಚಿತ್ರಗಳು |

**ವಿಶೇಷ ಸೂಚನೆ:-**

1) ಈ ತಿಳುವಳಿಕೆಯು ಮೂಲ ದಾಖಲೆಗಳ ಪರಿಶೀಲನೆಗೆ ಮಾತ್ರ ಅನ್ವಯಿಸತಕ್ಕದ್ದಾಗಿರುತ್ತದೆ.
2) ಅಭ್ಯರ್ಥಿಗಳು ಮೇಲ್ಕಂಡ ದಾಖಲೆಗಳನ್ನು ಅಧಿಸೂಚನೆ ಹೊರಡಿಸಿರುವ ಮುಕ್ತಾಯದ ದಿನಾಂಕದೊಳಗೆ ಪಡೆದಿರತಕ್ಕದ್ದು.

ಕ.ಟಿ.ಅ.ಮೇ)

ಅಪರ ಜಿಲ್ಲಾಧಿಕಾರಿ ಹಾಗೂ ಕಾರ್ಯದರ್ಶಿ,
ಗ್ರಾಮಲೆಕ್ಕಿಗರ ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರ,
ಚಿಕ್ಕಮಗಳೂರು ಜಿಲ್ಲೆ,ಚಿಕ್ಕಮಗಳೂರು.

**ಇವರಿಗೆ:**

ಲಗತ್ತಿಸಿರುವ ಪಟ್ಟಿಯಲ್ಲಿರುವ ಎಲ್ಲಾ ಅಭ್ಯರ್ಥಿಗಳಿಗೆ